**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 436 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಎಸ್.ನವೀನ್ |
| ಉತ್ತರಿಸುವ ದಿನಾಂಕ | : | 30-01-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿ ನಿಲಯಗಳಿವೆ; (ಜಿಲ್ಲಾವಾರು ವಿವರ ಒದಗಿಸುವುದು). | ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ವಿವರ ಕೆಳಕಂಡಂತಿದೆ. |

| ಕ್ರ.ಸಂ | ನಿಲಯಗಳ ವಿವರ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | | |
|---|---|---|---|---|
| | | ಬಾಲಕ | ಬಾಲಕಿ | ಒಟ್ಟು |
| 01 | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 917 | 298 | **1215** |
| 02 | ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳು | 419 | 300 | **719** |
| 03 | ದೀನದಯಾಳ್ ಉಪಾದ್ಯಾಯ ವಿದ್ಯಾರ್ಥಿ ನಿಲಯಗಳು | 2 | 2 | **4** |
| | **ಒಟ್ಟು :-** | **1338** | **600** | **1938** |

ಸದರಿ ವಿದ್ಯಾರ್ಥಿ ನಿಲಯಗಳ ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಪ್ರತಿ ವರ್ಷ ಎಷ್ಟು ಅರ್ಜಿಗಳು ವಿದ್ಯಾರ್ಥಿ ನಿಲಯಕ್ಕೆ ಬರುತ್ತವೆ; | ಕಳೆದ ಎರಡು ವರ್ಷಗಳಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಕೋರಿ ಸ್ವೀಕೃತವಾದ ಅರ್ಜಿಗಳ ವಿವರ ಹಾಗೂ ಪ್ರವೇಶ ನೀಡಲಾದ ವಿದ್ಯಾರ್ಥಿಗಳ ವಿವರ ಕೆಳಕಂಡಂತಿದೆ. |
| ಇ) | ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ; | |

**ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು :-**

| ಕ್ರ.ಸಂ | ವರ್ಷ | ಪ್ರವೇಶ ಕೋರಿ ಬಂದ ಅರ್ಜಿಗಳ ಸಂಖ್ಯೆ | | | ದಾಖಲಾತಿ ನೀಡಲಾದ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | ಪ.ಜಾತಿ / ಪ.ವರ್ಗ | ಇತರೆ ಹಿಂದುಳಿದ ವರ್ಗ | ಒಟ್ಟು | ಪ.ಜಾತಿ /ಪ.ವರ್ಗ | ಇತರೆ ಹಿಂದುಳಿದ ವರ್ಗ | ಒಟ್ಟು |
| 01 | 2024-25 | 85123 | 44795 | 129918 | 85123 | 22502 | 101475 |
| 02 | 2025-26 | 74186 | 45004 | 119190 | 74186 | 22502 | 96688 |

---2

**ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು :-**

| ಕ್ರ. ಸಂ | ವರ್ಷ | ಪ್ರವೇಶ ಕೋರಿ ಬಂದ ಅರ್ಜಿಗಳ ಸಂಖ್ಯೆ | | | ದಾಖಲಾತಿ ನೀಡಲಾದ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | ಪ.ಜಾತಿ / ಪ.ವರ್ಗ | ಇತರೆ ಹಿಂದುಳಿದ ವರ್ಗ | ಒಟ್ಟು | ಪ.ಜಾತಿ / ಪ.ವರ್ಗ | ಇತರೆ ಹಿಂದುಳಿದ ವರ್ಗ | ಒಟ್ಟು |
| 01 | 2024-25 | 100728 | 58281 | 159009 | 99272 | 19427 | 118699 |
| 02 | 2025-26 | 101930 | 59189 | 161119 | 99932 | 19427 | 119359 |

1. ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 87 ಸಮನ್ವಯ 2013, ದಿನಾಂಕ: 20-07-2013 ರನ್ವಯ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನಿಲಯದಲ್ಲಿ ಪ್ರವೇಶ ಕಲ್ಪಿಸಲಾಗುತ್ತಿದೆ. ಮುಂದುವರೆದು ಆಯಾ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಕಲ್ಪಿಸಬಹುದಾದ ಗರಿಷ್ಟ ವಿದ್ಯಾರ್ಥಿಗಳಿಗೆ ಮಿತಿಗೊಳಿಸಿ (PERMISSIBLE STRENGTH) ಹೆಚ್ಚುವರಿಯಾಗಿ ಪ್ರವೇಶಾತಿ ನೀಡಲಾಗುತ್ತಿದ್ದು, ಅದಕ್ಕಿಂತ ಹೆಚ್ಚಿನದಾಗಿ ಪ್ರವೇಶ ಕೋರಿ ಬರುತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ ಬಾಡಿಗೆ ಕಟ್ಟಡ ಪಡೆದು ಪ್ರವೇಶ ಕಲ್ಪಿಸಲಾಗುತ್ತಿದೆ.
2. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟಾರೆ ಮಂಜೂರಾತಿ ಸಂಖ್ಯೆಗೆ ಶೇಕಡ 25ರಷ್ಟು ಸ್ಥಾನಗಳನ್ನು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಿಟಿದ್ದು, ಅದರಂತೆ ಮೀಸಲಿಟ್ಟ ವಿದ್ಯಾರ್ಥಿಗಳ ಸಂಖ್ಯೆಗೆ ಮಾತ್ರ ಪ್ರವೇಶ ನೀಡಲಾಗುತ್ತಿದೆ.

ಈ) ಸದರಿ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ಯಾವ ರೀತಿಯಾಗಿ ಮಾಡಲಾಗುತ್ತದೆ;

ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ: ಸಕಇ 190 ಪಕವಿ 2022, ದಿನಾಂಕ:15.07.2022 ರಲ್ಲಿ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಕಇ 143 ಪಕವಿ 2023, ದಿನಾಂಕ:20.12.2023 ರನ್ವಯ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ಆನ್‌ಲೈನ್ ಮೂಲಕ ಇಲಾಖೆ ವೆಬ್‌ಸೈಟ್‌ನ HOSTEL MANAGEMENT INFORMATION SYSTEM (HMIS) ತಂತ್ರಾಂಶದ ಮೂಲಕ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 87 ಸಮನ್ವಯ 2013, ದಿನಾಂಕ: 20-07-2013 ರನ್ವಯ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನಿಲಯದಲ್ಲಿ ಪ್ರವೇಶ ಕಲ್ಪಿಸಲಾಗುತ್ತಿದೆ.

ಅದರಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ ಅರ್ಹರಿರುವ ಎಲ್ಲಾ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷಗಳ ಆದಾಯ ಮಿತಿಯೊಳಗಿರುವ ವಿದ್ಯಾರ್ಥಿಗಳು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಅರ್ಹರಿರುತ್ತಾರೆ.

---3

| | | |
|---|---|---|
| | | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಸಲ್ಲಿಸಲು ರೂ.2.50 ಲಕ್ಷಗಳ ಆದಾಯ ಮಿತಿ ಹಾಗೂ ಗರಿಷ್ಟ ವಯೋಮಿತಿ 28 ವರ್ಷಗಳಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಸಕಇ 160 ಪಕವಿ 2018, ದಿನಾಂಕ: 25-08-2018 ರಂತೆ ಇಲಾಖೆಯ ಎಲ್ಲಾ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ನಿಯಮಾನುಸಾರ ಶೇಕಡ 75%ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಿ, ಉಳಿದ ಶೇಕಡ 25%ರಷ್ಟು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾಂತರ ವಿದ್ಯಾರ್ಥಿಗಳಿಗೆ ಮಂಜೂರಾತಿ ಸಂಖ್ಯಾಬಲಕ್ಕೆ ಶೇಕಡ 25%ರಷ್ಟು (100 ಸಂಖ್ಯಾಬಲದ ಒಂದು ವಿದ್ಯಾರ್ಥಿನಿಲಯಕ್ಕೆ) ಸ್ಥಾನಗಳನ್ನು ಈ ಕೆಳಕಂಡಂತೆ ಕಾಯ್ದಿರಿಸಲಾಗಿದೆ.<br><br>ಬಿ.ಸಿ - ಪ್ರವರ್ಗ-1 - 3%<br>ಪ್ರವರ್ಗ – 2ಎ - 12%<br>ಪ್ರವರ್ಗ – 2ಬಿ - 3%<br>ಪ್ರವರ್ಗ – 3ಎ - 3%<br>ಪ್ರವರ್ಗ – 3ಬಿ - 4%<br>**ಒಟ್ಟು:-** **25%** |
| ಊ | ಪ್ರತಿಯೊಬ್ಬ ವಿದ್ಯಾರ್ಥಿಗೆ ಸರ್ಕಾರ ಒಂದು ವರ್ಷಕ್ಕೆ ಎಷ್ಟು ಹಣ ಖರ್ಚು ಮಾಡುತ್ತಿದೆ? | ಇಲಾಖೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ದಾಖಲಾಗುವ ಪ್ರತಿ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಬಾಲಕರಿಗೆ ರೂ.21,958/- ಹಾಗೂ ಬಾಲಕಿಯರಿಗೆ ರೂ.23,659/- ಗಳನ್ನು ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ದಾಖಲಾಗುವ ಪ್ರತಿ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಬಾಲಕರಿಗೆ ರೂ.37,915/- ಹಾಗೂ ಬಾಲಕಿಯರಿಗೆ ರೂ.39,462/- ಗಳನ್ನು ವೆಚ್ಚ ಮಾಡಲಾಗುತ್ತಿದೆ. |

**ಸಕಇ 119 ಪಕವಿ 2026**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಎಸ್ ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ:436ಕ್ಕೆ ಅನುಬಂಧ - 1

| ಕ್ರ. ಸಂ | ಜಿಲ್ಲೆಯ ಹೆಸರು | ಮೆಟ್ರಿಕ್ ಪೂರ್ವ ವಿ.ನಿಲಯಗಳ ಸಂಖ್ಯೆ | ಮೆಟ್ರಿಕ್ ನಂತರ ವಿ.ನಿಲಯಗಳ ಸಂಖ್ಯೆ | ದೀನದಯಾಳ್ ಉಪಾಧ್ಯಾಯ ವಿ. ನಿಲಯಗಳು | ಒಟ್ಟು |
|---|---|---|---|---|---|
| 1 | ಬಾಗಲಕೋಟೆ | 44 | 25 | 0 | 69 |
| 2 | ಬಳ್ಳಾರಿ | 22 | 18 | 0 | 40 |
| 3 | ಬೆಳಗಾವಿ | 66 | 31 | 0 | 97 |
| 4 | ಬೆಂಗಳೂರು (ಗ್ರಾ) | 23 | 10 | 0 | 33 |
| 5 | ಬೆಂಗಳೂರು (ನ) | 13 | 47 | 0 | 60 |
| 6 | ಬೀದರ್ | 42 | 19 | 0 | 61 |
| 7 | ಚಾಮರಾಜನಗರ | 40 | 16 | 0 | 56 |
| 8 | ಚಿಕ್ಕಬಳ್ಳಾಪುರ | 49 | 23 | 0 | 72 |
| 9 | ಚಿಕ್ಕಮಗಳೂರು | 37 | 22 | 0 | 59 |
| 10 | ಚಿತ್ರದುರ್ಗ | 52 | 41 | 0 | 93 |
| 11 | ದಕ್ಷಿಣ ಕನ್ನಡ | 19 | 11 | 0 | 30 |
| 12 | ದಾವಣಗೆರೆ | 38 | 30 | 0 | 68 |
| 13 | ಧಾರವಾಡ | 14 | 21 | 2 | 37 |
| 14 | ಗದಗ | 26 | 19 | 0 | 45 |
| 15 | ಹಾಸನ | 59 | 34 | 0 | 93 |
| 16 | ಹಾವೇರಿ | 37 | 23 | 0 | 60 |
| 17 | ಕಲಬುರಗಿ | 72 | 36 | 2 | 110 |
| 18 | ಕೊಡಗು | 17 | 4 | 0 | 21 |
| 19 | ಕೋಲಾರ | 52 | 19 | 0 | 71 |
| 20 | ಕೊಪ್ಪಳ | 33 | 18 | 0 | 51 |
| 21 | ಮಂಡ್ಯ | 46 | 22 | 0 | 68 |
| 22 | ಮೈಸೂರು | 45 | 40 | 0 | 85 |
| 23 | ರಾಯಚೂರು | 46 | 31 | 0 | 77 |
| 24 | ರಾಮನಗರ | 37 | 13 | 0 | 50 |
| 25 | ಶಿವಮೊಗ್ಗ | 49 | 30 | 0 | 79 |
| 26 | ತುಮಕೂರು | 62 | 41 | 0 | 103 |
| 27 | ಉಡುಪಿ | 15 | 8 | 0 | 23 |
| 28 | ಉತ್ತರಕನ್ನಡ | 26 | 7 | 0 | 33 |
| 29 | ವಿಜಯನಗರ | 39 | 24 | 0 | 63 |
| 30 | ವಿಜಯಪುರ | 57 | 21 | 0 | 78 |
| 31 | ಯಾದಗಿರಿ | 38 | 15 | 0 | 53 |
| | ಒಟ್ಟು | 1215 | 719 | 4 | 1938 |